International Journal of Applied Research 2022; 8(2): 38-42




**ISSN Print:** 2394-7500
**ISSN Online:** 2394-5869
**Impact Factor:** 8.4
IJAR 2022; 8(2): 38-42
www.allresearchjournal.com
Received: 16-12-2021
Accepted: 12-01-2022

**ಪ್ರೊ. ನರಸಿಂಹಮೂರ್ತಿ ಎಂ**
ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಕರ್ನಾಟಕ, ಭಾರತ

**ಶಿವಬಸವರಾಜು ಸಿಆರ್**
ಸಂಶೋಧನಾ ವಿದ್ಯಾರ್ಥಿ, ರಾಜಕೀಯ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಕರ್ನಾಟಕ, ಭಾರತ

**Corresponding Author:**
**ಪ್ರೊ. ನರಸಿಂಹಮೂರ್ತಿ ಎಂ**
ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಕರ್ನಾಟಕ, ಭಾರತ

# ಅಸ್ಪೃಶ್ಯತೆಯ ನಿವಾರಣೆಗಾಗಿ ಹೋರಾಡಿದ ಮಹಾನ್ ಸಮಾಜ ಸುಧಾರಕರಾದ ಡಾ.ಬಾಬಾ ಸಾಹೇಬ್ ಭೀಮ್‌ರಾವ್ ಅಂಬೇಡ್ಕರ್ ರವರ ಪಾತ್ರ

**ಪ್ರೊ. ನರಸಿಂಹಮೂರ್ತಿ ಎಂ, ಶಿವಬಸವರಾಜು ಸಿಆರ್**

**ಪೀಠಿಕೆ**

ಭಾರತದ ಸಾಂಪ್ರದಾಯಿಕ ವ್ಯವಸ್ಥೆಯು ವಿವಿಧ ಧರ್ಮ, ಜಾತಿ, ಜನಾಂಗಗಳಿಂದ ಕೂಡಿದ್ದು ಜಾತಿಯು ಮೇಲ್ವರ್ಗಗಳ ಸಂಪೂರ್ಣ ಹಿಡಿತದಲ್ಲಿದೆ. ಈ ವ್ಯವಸ್ಥೆಯಲ್ಲಿ 4 ವರ್ಣಗಳು, ಸಾವಿರಾರು ಜಾತಿಗಳು ಮತ್ತು ಉಪಜಾತಿಗಳು ಅಸ್ತಿತ್ವದಲ್ಲಿರುವುದನ್ನು ಕಾಣಬಹುದಾಗಿದೆ. ಇತ್ತೀಚಿನ ದಿನಗಳಲ್ಲಿ ಜಾತಿಗಳ ಸಂಖ್ಯೆ ಹೆಚ್ಚುತ್ತಾ ಹೋದಂತೆಲ್ಲಾ ಜಾತಿ ಮತ್ತು ಜಾತಿಗಳ ನಡುವೆ ಶ್ರೇಷ್ಠತೆಯ ಭಾವನೆ, ಅಸಮಾನತೆಯು ಇನ್ನಷ್ಟು ವ್ಯಾಪಕವಾಗುತ್ತಿದ್ದು ಹಿಂದುಳಿದ ಜಾತಿಗಳು ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತಿಲ್ಲ. ಜಾತಿ ವ್ಯವಸ್ಥೆಯಲ್ಲಿ ಬಹುಸಂಖ್ಯಾತ ಹಿಂದುಳಿದವರು, ಶೋಷಿತರು ಮತ್ತು ದಲಿತರು ಜಾತಿ ತಾರತಮ್ಯಕ್ಕೆ ಒಳಗಾಗುತ್ತಿದ್ದಾರೆ. ಜಾತಿ ವ್ಯವಸ್ಥೆ ಎಂಬುದು ಭಾರತೀಯ ಸಮಾಜದ ಲಕ್ಷಣಗಳಲ್ಲಿ ಒಂದಾಗಿದ್ದು ಮೇಲು ಕೀಳು, ಸ್ಪೃಶ್ಯ–ಅಸ್ಪೃಶ್ಯ ಎಂಬ ಭಾವನೆಗಳಿಂದಾಗಿ ಶೋಷಿತರು ಮತ್ತು ದಲಿತರು ಹಿನ್ನಡೆ ಅನುಭವಿಸುವಂತಾಗುತ್ತಿದೆ. ಇಂತಹ ವ್ಯವಸ್ಥೆಯ ವಿರುದ್ಧ ಹಲವಾರು ಭಾರತೀಯ ಸಮಾಜ ಸುಧಾರಕರು ಅಂದರೆ ಛತ್ರಪತಿ ಶಾಹು ಮಹಾರಾಜ, ಜ್ಯೋತಿಬಾ ಫುಲೆ, ಸಾವಿತ್ರಿಬಾಯಿ ಫುಲೆ, ಇ.ವಿ. ರಾಮಸ್ವಾಮಿ ನಾಯ್ಕರ್, ಬಸವಣ್ಣ, ಅಂಬೇಡ್ಕರ್ ಮುಂತಾದ ಮಹನೀಯರು ಧ್ವನಿ ಎತ್ತಿದ್ದಾರೆ. ಈ ಎಲ್ಲಾ ಸುಧಾರಕರು ಸಾಮಾಜಿಕ ನ್ಯಾಯ, ಆರ್ಥಿಕ ಸಮಾನತೆ ಹಾಗೂ ರಾಜಕೀಯ ಪ್ರಾತಿನಿಧ್ಯತೆಗಾಗಿ ಹೋರಾಟ ಮಾಡಿದವರಾಗಿದ್ದಾರೆ. ಸಾಮಾಜಿಕ ಅಸಮಾನತೆಯು ಎಲ್ಲಾ ಸಮಾಜಗಳಲ್ಲೂ ಕಂಡುಬಂದರೂ ಭಾರತೀಯ ಹಿಂದೂ ಸಾಂಪ್ರದಾಯಿಕ ಸಮಾಜದಲ್ಲಿ ಆಳವಾಗಿ ಬೇರೂರಿದೆ.

ಜಗತ್ತಿನ ಎಲ್ಲಾ ಭಾಗಗಳಲ್ಲಿ ಕೆಳಸ್ತರದ, ವರ್ಣಬೇಧ ಪರಿಕಲ್ಪನೆಗೆ ಒಳಗಾದ, ಶೋಷಣೆಗೆ ಒಳಗಾಗಿರುವ ಜನಸಮೂಹವನ್ನು ಗುರ್ತಿಸಬಹುದು. ರೋಮನ್ನರಲ್ಲಿ ಗುಲಾಮರು, ಸ್ಪಾರ್ಟನ್ನರಲ್ಲಿ ಜೀತದಾಳುಗಳು, ಬ್ರಿಟಿಷ್ ಪ್ರಾಂತ್ಯಗಳಲ್ಲಿ ನೀಚ ಪ್ರವೃತ್ತಿಯವರು, ಅಮೇರಿಕಾದಲ್ಲಿ ನೀಗ್ರೋಗಳು ಮತ್ತು ಜರ್ಮನ್ ರಾಷ್ಟ್ರದಲ್ಲಿ ಯಹೂದಿಗಳು ಇರುವಂತೆಯೇ ಭಾರತದ ಹಿಂದೂಗಳಲ್ಲಿಯೂ ಸಹ ಅಸ್ಪೃಶ್ಯರಿದ್ದಾರೆ. ಆದರೆ ವಿಶ್ವದ ಬೇರೆ ರಾಷ್ಟ್ರಗಳ ಸ್ಥಿತಿಗಳಿಗಿಂತ ಭಾರತದ ಅಸ್ಪೃಶ್ಯರ ಸ್ಥಿತಿಗತಿಗಳು ತೀರಾ ನಿಕೃಷ್ಟವಾಗಿದೆ. ಸಮಾಜ ಸುಧಾರಕರ ಪ್ರಯತ್ನದಿಂದಾಗಿ ಸಂವಿಧಾನಾತ್ಮಕ ಸೌಲಭ್ಯಗಳ ಮೂಲಕ ಗುಲಾಮಗಿರಿ, ಜೀತಪದ್ಧತಿ ಕಡಿಮೆಯಾಗಿದೆ ಎಂಬುದು ಮೇಲುನೋಟಕ್ಕೆ ಕಂಡುಬಂದಿದ್ದರೂ ಅಸ್ಪೃಶ್ಯತೆಯು ಹಾಗೆಯೇ ಜೀವಂತವಾಗಿರುವುದು ಕಂಡುಬರುತ್ತಿದೆ. ಈ ಜನ ಸಮೂಹ ನಿರ್ಲಕ್ಷಕ್ಕೆ ಗುರಿಯಾಗಿದ್ದಾರೆಯೇ ಹೊರತು ಸಬಲೀಕರಣದ ಅವಕಾಶಗಳಿಂದ ವಂಚಿತರಾಗಿರಲಿಲ್ಲ. ಆದರೆ ಭಾರತದ ಸನ್ನಿವೇಶದಲ್ಲಿ ಅಸ್ಪೃಶ್ಯರು ನಿರ್ಲಕ್ಷಕ್ಕೆ ಗುರಿಯಾಗಿರುವುದರ ಜೊತೆಗೆ ಪ್ರತಿಯೊಂದು ಅವಕಾಶಗಳಿಂದಲೂ ವಂಚಿಸಲ್ಪಟ್ಟಿದ್ದಾರೆ. ದೈಹಿಕ ಹಾಗೂ ಬೌದ್ಧಿಕ ಪರಿಶ್ರಮದ ನಡುವಿನ ತಾರತಮ್ಯ ಹೆಚ್ಚುತ್ತಿರುವುದು, ಈ ತಾರತಮ್ಯದ ಸಂಕೀರ್ಣತೆ ಹಾಗೂ ಇದರೊಂದಿಗೆ ಒಬ್ಬರನ್ನು ಉಚ್ಚ ಇನ್ನೊಬ್ಬನನ್ನು ಕನಿಷ್ಠನೆಂದು ಪರಿಗಣಿಸುವುದು ಇವೆಲ್ಲವೂ ಜಾತಿಯ ನಿರ್ಮಾಣಕ್ಕೆ ಹಿನ್ನೆಲೆಯಾಗುತ್ತದೆ. ಭಾರತದ ಜಾತಿಯ ಅನುಭವ ಬೇರಾವುದೇ ದೇಶಕ್ಕಿಂತಲೂ ದೊಡ್ಡದಾಗಿದ್ದು ಇಡೀ ಜಗತ್ತೇ ಇದರಿಂದ ಸಾಕಷ್ಟು ಪಾಠ ಕಲಿಯಬಹುದು.

ಜಾತಿಯಿಂದ ಭಾರತಕ್ಕೆ ಆಗಿರುವ ನಷ್ಟ ಹಾಗೂ ಅದರಿಂದ ಪಾರಾಗುವುದು ಹೇಗೆ ಎಂಬುದು ಮುಖ್ಯವಾಗಿದೆ. ಜಾತಿ ಸಂಬಂಧಗಳ ಜಾಡನ್ನು ಪರಿಮಿತಿಗೊಳಿಸುವುದರ ಮೂಲಕ ಉದಾತ್ತತೆಯನ್ನು ಸ್ವಾರ್ಥ ಸಾಧನೆಯ ಮಟ್ಟಕ್ಕೆ ತರಲಾಗಿದೆ. ದಲಿತರ ಕನಿಷ್ಟ ಹಕ್ಕುಗಳಿಗಾಗಿ ಹೋರಾಡಿದ ಮತ್ತು ಅವರ ಸ್ವಾತಂತ್ರ್ಯಕ್ಕಾಗಿ ಗಮನ ಹರಿಸಿದ ನಿದರ್ಶನಗಳು ವಿರಳವಾಗಿವೆ. ಈ ದೇಶದ ಮೂಲ ನಿವಾಸಿಗಳೆನಿಸಿದ ದ್ರಾವಿಡರನ್ನು ಮಧ್ಯ ಏಷ್ಯಾದಿಂದ ಬಂದ ಆರ್ಯರು ದ್ರಾವಿಡ ನಾಗರೀಕತೆಯ ಮೇಲೆ ದಾಳಿ ಮಾಡಿ ಈ ಮೂಲ ನಿವಾಸಿಗಳನ್ನು ನಿಯಂತ್ರಿಸಿದರು. ಹಾಗೆಯೇ ಶೂದ್ರರು ಮತ್ತು ಅತಿ ಶೂದ್ರರೆಂದು ಪ್ರತ್ಯೇಕಿಸುವ ಮೂಲಕ ಅವರನ್ನು ಶೋಷಣೆಗೆ ಒಳಪಡಿಸಿಕೊಂಡು ಭಾರತೀಯ ಸ್ಪೃಶ್ಯ ಸಮಾಜವನ್ನು ನಿರ್ಮಾಣ ಮಾಡಿಕೊಂಡರು.

ಸಾಂಪ್ರದಾಯಿಕ ಹಿಂದೂ ಸಾಮಾಜಿಕ ವ್ಯವಸ್ಥೆಯ ಪ್ರಮುಖ ಸ್ವರೂಪವಾದ ಅಸಮಾನತೆಯಿಂದಾಗಿ ಸವರ್ಣೀಯರು, ಶೂದ್ರರು ಮತ್ತು ಅಸ್ಪೃಶ್ಯರ ನಡುವಿನ ಸಾಮಾಜಿಕ ಅಂತರ ಅತ್ಯಂತ ವಿಸ್ತಾರವಾದುದಾಗಿದೆ. ಮೇಲ್ವರ್ಗದವರು ಎಲ್ಲಾ ಹಕ್ಕುಗಳು, ಸವಲತ್ತುಗಳು, ಅವಕಾಶಗಳು ಮತ್ತು ಸಾಮಾಜಿಕ ಅಂತಸ್ತನ್ನು ತೃಪ್ತಿದಾಯಿಕವಾಗಿ ಅನುಭವಿಸಿದರೆ ಇವೆಲ್ಲವುಗಳಿಂದ ಶೂದ್ರರು ಮತ್ತು ಅಸ್ಪೃಶ್ಯರನ್ನು ದೂರವಿರಿಸಲಾಯಿತು. ಈ ರೀತಿಯ ತಾರತಮ್ಯವು ಅಸಮಾನತೆ, ಶೋಷಣೆ, ದೌರ್ಜನ್ಯಗಳ ಅಮಾನುಷ ಪದ್ಧತಿಗಳಿಗೆ ಎಡೆ ಮಾಡಿತು. ಭಾರತ ಸಂವಿಧಾನದಲ್ಲಿ ಜಾತ್ಯಾತೀತ, ಸಮಾಜವಾದಿ, ರಾಷ್ಟವೆಂದು ಘೋಷಿಸಿಕೊಂಡಿದ್ದರೂ ಸಹ ಜಾತೀಯತೆ, ಬಡವ–ಬಲ್ಲಿದ, ಮೇಲು–ಕೀಳು, ಸ್ಪೃಶ್ಯ– ಅಸ್ಪೃಶ್ಯ, ಉತ್ತಮ–ನೀಚ ಎಂಬ ಬೇಧ, ತಾರತಮ್ಯವು ಎದ್ದು ಕಾಣುತ್ತದೆ. ಭಾರತ ದೇಶವು ಮೂಲತಃ ದುರ್ಬಲರು, ಶೋಷಿತರು ಹಾಗೂ ಹಿಂದುಳಿದವರ ನಾಡಾಗಿದ್ದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಬಹುಸಂಖ್ಯಾತರಾಗಿದ್ದಾರೆ. ಈ ದೇಶದಲ್ಲಿ ನಿಮ್ನ ವರ್ಗ ಅಥವಾ ದಲಿತ ವರ್ಗದವರಿಗೆ ಮೂಲಭೂತ ಅವಕಾಶಗಳು ದೊರೆಯದೆ ಅವರ ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿ ತೀರ ನಿಕೃಷ್ಟವಾಗಿತ್ತು. ಈ ದಿಶೆಯಲ್ಲಿ ದಲಿತ ವರ್ಗದವರಿಗೆ ಅದರಲ್ಲೂ ವಿಶೇಷವಾಗಿ ಪರಿಶಿಷ್ಟ ಜಾತಿಯವರ ಸಬಲೀಕರಣಕ್ಕಾಗಿ ಸ್ವಾತಂತ್ರ್ಯನಂತರ ಕೇಂದ್ರ ಮತ್ತು ರಾಜ್ಯಗಳ ಆಳುವ ಸರ್ಕಾರಗಳು ವಿವಿಧ ಕಾರ್ಯಕ್ರಮಗಳು ಹಾಗೂ ಯೋಜನೆಗಳನ್ನು ಹಮ್ಮಿಕೊಳ್ಳುತ್ತಿರುವುದು ಶ್ಲಾಘನೀಯವಾಗಿದೆ.

**ಅಸ್ಪೃಶ್ಯ ಎಂದರೆ ಯಾರು?**

ಪರಿಶಿಷ್ಟ ಜಾತಿಗಳನ್ನು ಸಾಮಾನ್ಯ ಜನರು 'ಅಸ್ಪೃಶ್ಯ' ಜಾತಿಗಳೆಂದೆ ಪರಿಗಣಿಸುತ್ತಿರುವ ಹಿನ್ನೆಲೆಯಲ್ಲಿ 'ಅಸ್ಪೃಶ್ಯರು' ಮತ್ತು 'ಅಸ್ಪೃಶ್ಯ ಜಾತಿ'ಗಳ ಬಗ್ಗೆ ವ್ಯಾಖ್ಯೆ ಇಲ್ಲಿ ಅಪ್ರಸ್ತುತವೆನಿಸದು. ಅಸ್ಪೃಶ್ಯರು ಎಂದರೆ ಯಾರು? ಅಥವಾ ಅಸ್ಪೃಶ್ಯ ಜಾತಿಗಳೆಂದರೆ ಯಾವುವು ಎಂಬ ಕುರಿತಾಗಿ ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಡಾ.ಟಿ.ಎಸ್. ಮಜುಮ್‌ದಾರ್‌ರವರ ವ್ಯಾಖ್ಯೆಗಳು ಕೆಳಗಿನಂತಿವೆ.

ಡಾ.ಬಿ.ಆರ್. ಅಂಬೇಡ್ಕರ್ ಹೇಳುವಂತೆ "ಹೊರಗಿನಿಂದ ಬಂದವರು ಊರ ಹೊರಗಡೆ ನೆಲೆಸಿದರೋ ಅಥವಾ ಊರಿನೊಳಗೆ ವಾಸಿಸುತ್ತಿದ್ದ ಜನರನ್ನು ಕೆಲವಾರು ಕಾರಣಾಂತರಗಳಿಂದ ಊರ ಹೊರಗೆ ಅಟ್ಟಲಾಯಿತೋ ಎಂಬುದನ್ನು ವಿಮರ್ಶಿಸಿದರೆ ಅಸ್ಪೃಶ್ಯತೆಯ ಆರಂಭದ ಬಗ್ಗೆ ಮತ್ತು ಅಸ್ಪೃಶ್ಯರಾರೆಂಬ ಬಗ್ಗೆ ತಿಳಿದುಬರುವುದು.

**ಅಸ್ಪೃಶ್ಯತೆಯ ನಿವಾರಣೆಗಾಗಿ ಹೋರಾಡಿದ ಮಹಾನ್ ಸಮಾಜ ಸುಧಾರಕರು**

ಸಮಾಜದಲ್ಲಿ ನಡೆಯುತ್ತಿರುವಂತ ಅಸ್ಪೃಶ್ಯತೆ ಎಂಬ ಕೆಟ್ಟ ಸಾಂಪ್ರದಾಯಿಕ ಪದ್ಧತಿಯನ್ನು ನಿಲ್ಲಿಸಬೇಕೆಂದು ಬೌದ್ಧರ ಕಾಲದಲ್ಲಿಯೇ ಈ ಅನಿಷ್ಠ ಪದ್ಧತಿ ಬಗ್ಗೆ ಚಕಾರ ಎತ್ತಿದ್ದಾರೆ. ಅಷ್ಟೇ ಅಲ್ಲದೆ

- 11ನೇ ಶತಮಾನದಲ್ಲಿ ರಾಮಾನುಜಚಾರ್ಯರು
- 12ನೇ ಶತಮಾನದಲ್ಲಿ ಕರ್ನಾಟಕದ ಬಸವೇಶ್ವರರು
- 20ನೇ ಶತಮಾನದಲ್ಲಿ ಕೇರಳದ ನಾರಾಯಣಗುರು
- ಮಹಾರಾಷ್ಟ್ರದಲ್ಲಿ ಮಹಾತ್ಮ ಜ್ಯೋತಿ ಭಾ ಫುಲೆ

ಇಷ್ಟೇ ಅಲ್ಲದೇ ವಿಶೇಷವಾಗಿ ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ರವರ ಪಾತ್ರವನ್ನು ನಾವು ಗಮನಿಸಬಹುದಾಗಿದೆ.

**ಅಸ್ಪೃಶ್ಯತೆಯ ಉಗಮ**

**ನಮ್ಮ ದೇಶವು ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರ. ಇಲ್ಲಿ ಸಂವಿಧಾನದ ಮುಂದೆ ಎಲ್ಲಾ ನಾಗರೀಕರು ಸಮಾನರು. ಆದರೆ ಸಮಾಜದ ಸಾಮಾಜಿಕ ವ್ಯವಸ್ಥೆಯನ್ನ ಸೂಕ್ಮವಾಗಿ ಗಮನಿಸಿದಾಗ ಅರಿವಿಗೆ ಬರುತ್ತದೆ, ನಾವು ಎಷ್ಟರ ಮಟ್ಟಿಗೆ ನಮ್ಮ ಸಮಾಜದಲ್ಲಿ ಮಾನವ ಮಾನವರ ನಡುವೆ ಎಷ್ಟು ಹೊಂದಾಣಿಕೆಯಿಂದ ಜೀವನ ಸಾಗಿಸುತ್ತಿದ್ದೇವೆ ಎಂದು. ಅಂದರೆ ಬಿ.ಆರ್.ಅಂಬೇಡ್ಕರ್** ರವರ ಅಧ್ಯಯನದ ಪ್ರಕಾರ ಅಸ್ಪೃಶ್ಯತೆಯು ಕ್ರಿ.ಶ. 400 ರಲ್ಲಿ ಪ್ರಾರಂಭವಾಗಿದೆ ಎಂದು ಅಂದಾಜಿಸಲಾಗಿದೆ. ಅಂದರೆ ಭಾರತದಲ್ಲಿ ಅಸ್ಪೃಶ್ಯತೆಯು ಮೇಲ್ಜಾತಿಯ ಜನರ ಅದರಲ್ಲು ಬ್ರಾಹ್ಮಣರ ಶಿಕ್ಷಣ ಹಾಗೂ ಮುಂದಾಲೋಚನೆಯ ಪರಿಣಾಮ ಭಾರತದಲ್ಲಿ ಅಸ್ಪೃಶ್ಯತೆಯು ಉಗಮವಾಯಿತು. ಅಂದರೆ ನಮ್ಮ ಪ್ರಾಚೀನ ಸಂಸ್ಕೃತಿಗಳಾದ ಸಿಂಧೂಬಯಲಿನ ನಾಗರಿಕತೆ ಹಾಗೂ ಹರಪ್ಪ ಮತ್ತು ಮೆಹೆಂಜೋದಾರೋ ನಾಗರಿಕತೆಯ ಕಾಲಘಟಟ್ಟದಲ್ಲಿ ಯಾವುದೇ ರೀತಿಯ ಅಸ್ಪೃಶ್ಯತೆ ಆಚರಣೆ ಜಾರಿಯಲ್ಲಿರಲಿಲ್ಲ. ಅಂದರೆ ಇತಿಹಾಸ ತಜ್ಞ ಝಾ ರವರ ಪ್ರಕಾರ ವೇದಗಳ ಕಾಲದಲ್ಲಿಯು ಸಹ ಅಸ್ಪೃಶ್ಯ ಆಚರಣೆಯ ಉಲ್ಲೇಖ ವೈದಿಕ ಪಠ್ಯವಾದ ಋಗ್ವೇದದಲ್ಲು ಸಹ ದಾಖಲಾಗಿಲ್ಲ ಎಂಬದು ಅಂದಿನ ಸಮ ಸಮಾಜದ ಆಶಯವನ್ನು ಬೆಳಕಿಗೆ ತಂದಿದೆ. ಅಂದರೆ ಈ ಅಸ್ಪೃಶ್ಯತೆ ಎಂಬ ಸಾಮಾಜಿಕ ಪಿಡುಗು ಕ್ರಿ.ಶ. 600–1200 ಕಾಲಘಟ್ಟದಲ್ಲಿ ಹೆಚ್ಚು ಆಚರಣೆಗೆ ಬಂದಿದೆ ಎಂದು ತಿಳಿಸಿದ್ದಾರೆ. ಅಸ್ಪೃಶ್ಯತೆಯ ಉಗಮದ ಬಗೆ ಹಲವಾರು ಸಾಮಾಜಿಕ ಚಿಂತಕರು ಹಾಗೂ ಸಾಮಾಜಿಕ ಸುಧಾರಕರು ಈ ಬಗ್ಗೆ ಆಳವಾದ ವೈಜ್ಞಾನಿಕ ಅಧ್ಯಯನವನ್ನು ಕೈಗೊಂಡು ಅಸ್ಪೃಶ್ಯತೆಯ ಉಗಮದ ಮೇಲೆ ಬೆಳಕು ಚೆಲ್ಲಿದ್ದಾರೆ.

**ಉದ್ದೇಶಗಳು**

- ಅಸ್ಪೃಶ್ಯತೆಯ ಹಿನ್ನೆಲೆಯನ್ನು ಅಧ್ಯಯನ ಮಾಡುವುದು.
- ಅಸ್ಪೃಶ್ಯತೆಯ ಬಗ್ಗೆ ಡಾ.ಬಿ.ಆರ್. ಅಂಬೇಡ್ಕರ್ ರವರ ಪಾತ್ರದ ಬಗ್ಗೆ ತಿಳಿಯುವುದು

**ಮಾಹಿತಿ ವಿಧಾನ**

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಐತಿಹಾಸಿಕ ದಾಖಲೆಗಳು, ಬರಹಗಳು, ಸಾಕ್ಷ್ಯಾಧಾರಗಳು, ದಾಸ್ತಾವೇಜಿನ ಮೂಲಗಳಾದ ದಿನಚರಿಗಳು, ಗ್ರಂಥಗಳು, ಕೈಪಿಡಿಗಳು, ಸಂಯೋಜಿತ ವರದಿಗಳು, ಸಂಶೋಧನಾ ಲೇಖನಗಳು, ದಿನಪತ್ರಿಕೆ ಲೇಖನಗಳು, ವಾರ್ತಾಪತ್ರಿಕೆಗಳು, ಹಸ್ತಪ್ರತಿಗಳು, ಪುಸ್ತಕಗಳು ಹಾಗೂ ಸರ್ಕಾರಿ ಇಲಾಖೆಗಳು ಪ್ರಕಟಿಸುವ ಯೋಜನಾ ಪರಿಚಯ ಪುಸ್ತಕಗಳು ಹಾಗೂ ಕಾರ್ಯ ಸೂಚಿಗಳಿಂದ ಮತ್ತು ಇಲಾಖೆಗೆ ಸಂಬಂಧಿಸಿದ ವ್ಯಕ್ತಿಗಳು ಹಾಗೂ ಅಂತರ್ಜಾಲದಲ್ಲಿ ದೊರೆಯುವ ವಿಷಯಗಳಿಂದ ಮಾಹಿತಿಯನ್ನು ಪಡೆಯಲಾಗಿದೆ.

ಭಾರತದಲ್ಲಿ ದಲಿತರ ಮೇಲಿನ ದೌರ್ಜನ್ಯಗಳ ಅಂಕಿ-ಅಂಶಗಳು

| ರಾಜ್ಯಗಳು | ದಲಿತರ ಮೇಲಿನ ದೌರ್ಜನ್ಯಗಳು ಪ್ರತಿ 1,00,000 ದಲಿತ ಜನಸಂಖ್ಯೆಗೆ ಅನುಗುಣವಾಗಿ | ಶ್ರೇಣಿ |
|---|---|---|
| ರಾಜಸ್ಥಾನ | 57.3 | 1 |
| ಆಂಧ್ರಪ್ರದೇಶ | 52.3 | 2 |
| ಗೋವ | 51.1 | 3 |
| ಬಿಹಾರ | 38.9 | 4 |
| ಸಿಕ್ಕಿಂ | 38.9 | 5 |
| ಮಧ್ಯಪ್ರದೇಶ | 36.9 | 6 |
| ದಮನ್ ಮತ್ತು ದಿಯು | 32.7 | 7 |
| ಒಡಿಶಾ | 32.1 | 8 |
| ಛತ್ತೀಸ್‌ಘಡ್ | 31.4 | 9 |
| ತೆಲಂಗಾಣ | 30.9 | 10 |
| ಗುಜರಾತ್ | 25.7 | 11 |
| ಕೇರಳ | 24.7 | 12 |
| ಉತ್ತರ ಪ್ರದೇಶ | 20.2 | 13 |
| ಕರ್ನಾಟಕ | 19.0 | 14 |
| ಜಾರ್ಖಂಡ್ | 18.5 | 15 |
| ಹರಿಯಾಣ | 16.3 | 16 |
| ಮಹಾರಾಷ್ಟ್ರ | 13.7 | 17 |
| ತಮಿಳುನಾಡು | 12.3 | 18 |
| ಹಿಮಾಚಲ ಪ್ರದೇಶ | 5.5 | 19 |

**ಮೂಲ:** National Crime Records Bureau -2011

**ಅಸ್ಪೃಶ್ಯತೆ ನಿವಾರಣೆ ಬಗ್ಗೆ ಡಾ. ಬಿ.ಆರ್.ಅಂಬೇಡ್ಕರ್ ರವರ ಪಾತ್ರ:**

ಶತ-ಶತಮಾನಗಳಿಂದ ಸಾಮಾಜಿಕ ಮತ್ತು ಧಾರ್ಮಿಕ ಅಸಮಾನತೆ, ಆರ್ಥಿಕ ಶೋಷಣೆ, ಶೈಕ್ಷಣಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಹಿಂದುಳಿದಿರುವಂತಹ ಪರಿಶಿಷ್ಟ ಜಾತಿಯ ಜನರು ಅನಕ್ಷರತೆ ಹಾಗೂ ಬಡತನದಿಂದ ಬದುಕುತ್ತಿದ್ದಾರೆ. 2011 ರ ಜನಗಣತಿ ಪ್ರಕಾರ ಕರ್ನಾಟಕ ರಾಜ್ಯದ ಸಾಕ್ಷರತೆ ಶೇ.74.6 ರಷ್ಟಿದ್ದು, ಪರಿಶಿಷ್ಟ ಜಾತಿಯ ಜನರು ಶೇ.67 ರಷ್ಟು ಶಿಕ್ಷಿತರಾಗಿದ್ದಾರೆ. ಉಳಿದ ಶೇ.33 ರಷ್ಟು ಜನರು ಅನಕ್ಷರತೆ ಹಾಗೂ ಅಂಧಕಾರದ ಬದುಕು ಸಾಗಿಸುತ್ತಿದ್ದಾರೆ. ಆರ್ಥಿಕವಾಗಿ ಈ ವರ್ಗದ ಜನರು ಶೋಷಣೆಗೆ ಒಳಗಾಗಿದ್ದು ಶೇ.77ರಷ್ಟು ಭೂರಹಿತರಾಗಿದ್ದು ಜೀತ ಹಾಗೂ ಕೂಲಿಯಂತಹ ವೃತ್ತಿಗಳನ್ನು ನಿರ್ವಹಿಸುತ್ತಿದ್ದಾರೆ. ಶೇ.80ರಷ್ಟು ಗ್ರಾಮೀಣ ಪ್ರದೇಶಗಳಲ್ಲಿ ನೆಲೆಸಿರುವ ಈ ವರ್ಗದ ಜನರು ಜೀತದಾಳುಗಳಾಗಿ ಜಮೀನುದಾರರನ್ನು ಆಶ್ರಯಿಸಿ ಬದುಕುತ್ತಿದ್ದಾರೆ. ವಿವಿಧ ಸಂವಿಧಾನಾತ್ಮಕ ರಕ್ಷಣೆಗಳು ಹಾಗೂ ಪ್ರತ್ಯೇಕ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನವಿದ್ದಾಗ್ಯೂ ಪರಿಶಿಷ್ಟ ಜಾತಿ ಜನರ ಸ್ಥಿತಿಗತಿ ವಿವಿಧ ಕಡೆಗಳಲ್ಲಿ ಧಾರುಣವಾಗಿಯೇ ಇದೆ. ಅಸ್ಪೃಶ್ಯತೆಯ ನಿಷೇಧ ಕಾಯಿದೆ ಮತ್ತು ಮೀಸಲಾತಿಗಳಿಂದ ಇವರ ಸ್ಥಿತಿಗತಿ ಸಾಕಷ್ಟು ರೀತಿಯಲ್ಲಿ ಸುಧಾರಿಸಿಲ್ಲದಿರುವುದು ಕಂಡುಬರುತ್ತಿದೆ. ಸಮಾಜದಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿರುವ ಈ ವರ್ಗದ ಜನರು ಸಾಮಾಜಿಕ ಒಡನಾಟದಿಂದ ವಂಚಿತರಾಗಿ ಅಸಮಾನತೆಯ ಜೀವನ ನಡೆಸುತ್ತಿದ್ದಾರೆ. ಆರ್ಥಿಕವಾಗಿ ಸಬಲರಲ್ಲದ ಈ ಜನರು ಬೇರೊಬ್ಬರ ಆಶ್ರಯದಲ್ಲಿ ಬದುಕುತ್ತಿದ್ದಾರೆ. ಇಂತಹ ವರ್ಗಗಳ ಬಗ್ಗೆ ರಾಜ್ಯದಲ್ಲಿ ಅಧ್ಯಯನಗಳು ಅತಿಹೆಚ್ಚು ಕಂಡುಬಂದಿರುವುದಿಲ್ಲ. ಆದ್ದರಿಂದ ಈ ವರ್ಗಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯವಾಗಿ ಸಬಲೀಕರಣಗೊಳಿಸುವ ಉದ್ದೇಶದ ಹಿನ್ನೆಲೆಯಲ್ಲಿ ಈ ವರ್ಗದ ಜನರ ಸಬಲೀಕರಣ ಅತ್ಯಗತ್ಯವಾಗಿದೆ. ದಲಿತರ ಕನಿಷ್ಠ ಹಕ್ಕುಗಳಿಗಾಗಿ ಹೋರಾಡಿದ ಮತ್ತು ಅವರ ಸ್ವಾತಂತ್ರ್ಯಕ್ಕಾಗಿ ಗಮನ ಹರಿಸಿದ ನಿದರ್ಶನಗಳು ವಿರಳವಾಗಿವೆ. ಈ ದೇಶದ ಮೂಲ ನಿವಾಸಿಗಳೆನಿಸಿದ ದ್ರಾವಿಡರನ್ನು ಮಧ್ಯ ಏಷ್ಯಾದಿಂದ ಬಂದ ಆರ್ಯರು ದ್ರಾವಿಡ ನಾಗರೀಕತೆಯ ಮೇಲೆ ದಾಳಿ ಮಾಡಿ ಈ ಮೂಲ ನಿವಾಸಿಗಳನ್ನು ನಿಯಂತ್ರಿಸಿದರು. ಹಾಗೆಯೇ ಶೂದ್ರರು ಮತ್ತು ಅತಿ ಶೂದ್ರರೆಂದು ಪ್ರತ್ಯೇಕಿಸುವ ಮೂಲಕ ಅವರನ್ನು ಶೋಷಣೆಗೆ ಒಳಪಡಿಸಿಕೊಂಡು ಭಾರತೀಯ ಸ್ಪೃಶ್ಯ ಸಮಾಜವನ್ನು ನಿರ್ಮಾಣ ಮಾಡಿಕೊಂಡರು. “ಸಾಂಪ್ರದಾಯಿಕ ಹಿಂದೂ ಸಾಮಾಜಿಕ ವ್ಯವಸ್ಥೆಯ ಪ್ರಮುಖ ಸ್ವರೂಪವಾದ ಅಸಮಾನತೆಯಿಂದಾಗಿ ಸವರ್ಣೀಯರು, ಶೂದ್ರರು ಮತ್ತು ಅಸ್ಪೃಶ್ಯರ ನಡುವಿನ ಸಾಮಾಜಿಕ ಅಂತರ

ಅತ್ಯಂತ ವಿಸ್ತಾರವಾದುದಾಗಿದೆ. ಮೇಲ್ವರ್ಗದವರು ಎಲ್ಲಾ ಹಕ್ಕುಗಳು, ಸವಲತ್ತುಗಳು, ಅವಕಾಶಗಳು ಮತ್ತು ಸಾಮಾಜಿಕ ಅಂತಸ್ತನ್ನು ತೃಪ್ತಿದಾಯಿಕವಾಗಿ ಅನುಭವಿಸಿದರೆ ಇವೆಲ್ಲವುಗಳಿಂದ ಶೂದ್ರರು ಮತ್ತು ಅಸ್ಪೃಶ್ಯರನ್ನು ದೂರವಿರಿಸಲಾಯಿತು." ಈ ರೀತಿಯ ತಾರತಮ್ಯವು ಅಸಮಾನತೆ, ಶೋಷಣೆ, ದೌರ್ಜನ್ಯಗಳ ಅಮಾನುಷ ಪದ್ದತಿಗಳಿಗೆ ಎಡೆ ಮಾಡಿತು. ಭಾರತ ದೇಶವು ಮೂಲತಃ ದುರ್ಬಲರು, ಶೋಷಿತರು ಹಾಗೂ ಹಿಂದುಳಿದವರ ನಾಡಾಗಿದ್ದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಬಹುಸಂಖ್ಯಾತರಾಗಿದ್ದಾರೆ. "ಪರಿಶಿಷ್ಟ ಜಾತಿಗಳು ಎದುರಿಸುತ್ತಿರುವ ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳನ್ನು ವಿಶ್ಲೇಷಿಸಿದಾಗ ಅವರು ವಿವಿಧ ಬಗೆಯ ಅವಕಾಶ ವಂಚನೆಗಳಿಗೆ ಒಳಗಾಗಿರುವುದು ಕಂಡುಬರುತ್ತದೆ. ಹಾಗೆಯೇ ಪರಿಶಿಷ್ಟ ಜಾತಿಗಳ ಸಬಲೀಕರಣ ವಿಭಿನ್ನ ನೆಲೆಗಳಿಂದ ಕೂಡಿದ್ದು ಇವರು ಶತ ಶತಮಾನಗಳಿಂದಲೂ ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ, ಆದ್ದರಿಂದಾಗಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಪ್ರಯತ್ನ ಆಗಬೇಕಾಗಿದೆ."

ಭಾರತದ ಜಾತಿಗಳ ಶ್ರೇಣಾತ್ಮಕ ವ್ಯವಸ್ಥೆಯಲ್ಲಿ ಪರಂಪರಾಗತವಾಗಿ ಹಲವಾರು ಬಗೆಯ ಅಸಮಾನತೆಗೆ ಒಳಗಾಗಿರುವ ಹಾಗೂ ಅತ್ಯಂತ ಕೆಳಸ್ತರದಲ್ಲಿರುವ ಜಾತಿಗಳನ್ನು ಶೋಷಿತರ ಧ್ವನಿಯಾದ ಹಾಗೂ ದಲಿತರ ಆಶಾಕಿರಣವಾದ ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ರವರು 'ನಿಮ್ನ ವರ್ಗ' ಗಳೆಂದು ಕರೆದರು. ಕಾನೂನಿನ ಪರಿಭಾಷೆಯಲ್ಲಿ ಇವರನ್ನು ಪರಿಶಿಷ್ಟ ಜಾತಿಗಳು ಅಥವಾ ಷೆಡ್ಯೂಲ್ ಕ್ಯಾಸ್ಟ್ ಎನ್ನಲಾಗುತ್ತದೆ. ಈ ದೇಶದಲ್ಲಿ ನಿಮ್ನ ವರ್ಗ ಅಥವಾ ದಲಿತ ವರ್ಗದವರಿಗೆ ಮೂಲಭೂತ ಅವಕಾಶಗಳು ದೊರೆಯದೆ ಅವರ ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿ ತೀರ ನಿಕೃಷ್ಟವಾಗಿತ್ತು. ಈ ದಿಶೆಯಲ್ಲಿ ದುರ್ಬಲ ಅಥವಾ ದಲಿತ ವರ್ಗದವರಿಗೆ ಅದರಲ್ಲೂ ವಿಶೇಷವಾಗಿ ಪರಿಶಿಷ್ಟ ಜಾತಿಯವರ ಸಬಲೀಕರಣಕ್ಕಾಗಿ ಸ್ವಾತಂತ್ರ್ಯ ನಂತರ ಕೇಂದ್ರ ಮತ್ತು ರಾಜ್ಯಗಳ ಆಳುವ ಸರ್ಕಾರಗಳು ವಿವಿಧ ಕಾರ್ಯಕ್ರಮ ಹಾಗೂ ಯೋಜನೆಗಳನ್ನು ಹಮ್ಮಿಕೊಂಡಿದೆ. ಅಲ್ಲದೆ ಬೃಹತ್ ಭಾರತ ಸಂವಿಧಾನದಲ್ಲೂ ಅವರ ಹಿತಾಸಕ್ತಿಗಳನ್ನು ರಕ್ಷಿಸಲು ಅನೇಕ ನಿಯಮಗಳನ್ನು ಮಾಡಲಾಗಿದೆ. ಶತ-ಶತಮಾನಗಳಿಂದ ಶೋಷಣೆಗೆ ಒಳಪಟ್ಟಿರುವ ಹಾಗೂ ಹಿಂದೂ ಸಮಾಜದ ಕಟ್ಟಕಡೆಯ ಸಮುದಾಯ ಎಂದು ಬಿಂಬಿಸಲಾಗಿರುವ ಪರಿಶಿಷ್ಟ ಜಾತಿಗಳನ್ನು ಸಮಾಜದ ಮುಖ್ಯವಾಹಿನಿಗೆ ತರಲು ಸ್ವಾತಂತ್ರ್ಯ ನಂತರ ಭಾರತದಲ್ಲಿ ಹಲವಾರು ಇಲಾಖೆಗಳು ಶ್ರಮಿಸುತ್ತಿವೆ. ಅದರಲ್ಲಿ ಮುಖ್ಯವಾಗಿ ಕರ್ನಾಟಕ ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆ ಹಾಗೂ ಈ ಇಲಾಖೆಯ ವ್ಯಾಪ್ತಿಗೆ ಬರುವ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ದಿ ನಿಗಮ ನಿಯಮಿತವು ಒಂದಾಗಿದೆ. ಈ ನಿಗಮ ನಿಯಮಿತವು ಪರಿಶಿಷ್ಟ ಜಾತಿಯ ಪುರುಷ ಮತ್ತು ಮಹಿಳೆಯರಿಗೆ ವಿವಿಧ ಯೋಜನೆಗಳ ಮೂಲಕ ಸೇವೆಯನ್ನು ಒದಗಿಸುತ್ತಿದೆ. ಕರ್ನಾಟಕ ರಾಜ್ಯದ ಸನ್ನಿವೇಶದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ದಿ ನಿಗಮ ನಿಯಮಿತ ಎಂದರೆ ಸಮಾಜದ ಹಿಂದುಳಿದ, ಅನಾನುಕೂಲತೆಗಳಿಗೆ ಒಳಗಾದ ಹಾಗೂ ಆರ್ಥಿಕವಾಗಿ ಕಡಿಮೆ ಸೌಲಭ್ಯಗಳನ್ನು ಹೊಂದಿರುವ ಪರಿಶಿಷ್ಟ ಜಾತಿಯ ಜನರಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುತ್ತಿರುವ ಒಂದು ಇಲಾಖೆ ಎಂದು ಅರ್ಥೈಸಿಕೊಳ್ಳಲಾಗಿದೆ.

ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರ ಅಭ್ಯುದಯಕ್ಕಾಗಿ ಮತ್ತು ಅವರನ್ನು ವಿವಿಧ ಕ್ಷೇತ್ರಗಳಲ್ಲಿ ಸಬಲೀಕರಣಗೊಳಿಸುವ ಸಲುವಾಗಿ ಕರ್ನಾಟಕ ರಾಜ್ಯ ಸರ್ಕಾರವು ಕಂಪನಿ ಕಾಯ್ದೆ-1956 ರ ಅಡಿಯಲ್ಲಿ ದಿನಾಂಕ 20-03-1975 ರಂದು ಕರ್ನಾಟಕ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಅಭಿವೃದ್ದಿ ನಿಗಮವನ್ನು ಸ್ಥಾಪಿಸಿರುತ್ತದೆ. ಬಳಿಕ ಸರ್ಕಾರವು ಇದಕ್ಕೆ 16-08-2005 ರಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ದಿ ನಿಗಮ ನಿಯಮಿತ ಎಂದು ಮರುನಾಮಕರಣ ಮಾಡಲಾಗಿದೆ. ಇದರ ಮೂಲ ಉದ್ದೇಶ ಪರಿಶಿಷ್ಟ ಜಾತಿಯವರ ಅಭಿವೃದ್ಧಿಗಾಗಿ ಶ್ರಮಿಸಿ ಅವರ ಸಬಲೀಕರಣಕ್ಕೆ ಪೂರಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಾಗಿದೆ.

ಕರ್ನಾಟಕ ರಾಜ್ಯದ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ದಿ ನಿಗಮ ನಿಯಮಿತವು ವಿಶೇಷವಾಗಿ ಪರಿಶಿಷ್ಟ ಜಾತಿಯವರ ಸಬಲೀಕರಣಕ್ಕಾಗಿ ಸೇವೆ ನೀಡುತ್ತಿದ್ದು, ಈ ಜನರಿಗೆ ವಿವಿಧ ಯೋಜನೆಗಳ ಬಗೆಗೆ ಅರಿವನ್ನು ಮೂಡಿಸುವುದರ ಮೂಲಕ ಅವರ ಅಭಿವೃದ್ದಿಯಲ್ಲಿ ಪ್ರಧಾನವಾದ ಪಾತ್ರ ವಹಿಸುತ್ತಿದೆ. ಪ್ರಸ್ತುತ ಅಧ್ಯಯನವು ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ಕರ್ನಾಟಕದಲ್ಲಿನ ಅಸ್ಪೃಶ್ಯತಾ ನಿವಾರಣೆಯ ನೀತಿ ಮತ್ತು ಕಾರ್ಯಕ್ರಮಗಳ ಅನುಷ್ಠಾನ ಎಂಬ ವಿಷಯವನ್ನು ಕೈಗೊಳ್ಳಲಾಗಿದ್ದು, ಅಸ್ಪೃಶ್ಯರ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಯೋಜನೆಗಳು ಮತ್ತು ಕಾರ್ಯಕ್ರಮಗಳು ಎಷ್ಟರ ಮಟ್ಟಿಗೆ ಅನುಷ್ಠಾನಗೊಳ್ಳುತ್ತಿವೆ ಮತ್ತು ಅದರ ಪ್ರತಿಫಲ ಹೇಗೆ ದೊರಕುತ್ತಿವೆ ಎಂಬುದನ್ನು ಈ ಅಧ್ಯಯನದಲ್ಲಿ ಮುಖ್ಯವಾಗಿಸಿಕೊಂಡು ಕೈಗೊಳ್ಳಲಾದ ಸಂಶೋಧನೆಯಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ದಿ ನಿಗಮ ನಿಯಮಿತವು ಪರಿಶಿಷ್ಟ ಜಾತಿಗಳ ಸರ್ವತೋಮುಖ ಅಭಿವೃದ್ದಿಗೆ ಮತ್ತು ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಹಾಗೂ ದೇಶದ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಪ್ರಗತಿಯಲ್ಲಿ ಪರಿಪೂರ್ಣರನ್ನಾಗಿಸುವ ಹೊಣೆಗಾರಿಕೆಯನ್ನು ಹೊಂದಿದೆ. ಹೀಗೆ ಮಾಡುವುದರಿಂದ ಪರಿಶಿಷ್ಟ ಜಾತಿಯವರನ್ನು ಸಾಮಾಜಿಕ ನ್ಯಾಯದ ಆಧಾರದ ಮೇಲೆ ಅವರ ಸಾಮಾಜಿಕ ಅಂತಸ್ತನ್ನು ವೃದ್ದಿಸಿಕೊಳ್ಳಲು ಸಹಾಯಕವಾಗುತ್ತದೆ. ನಿಗಮದ ಹಿನ್ನೆಲೆಯಲ್ಲಿ ಪರಿಶಿಷ್ಟ ಜಾತಿಯವರ ಸಬಲೀಕರಣದ ಸಾಧನೆ ಗಣನೀಯ ಪ್ರಮಾಣದಲ್ಲಿ ಆಗಬೇಕಾಗಿದೆ.

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ದಿ ನಿಗಮ ನಿಯಮಿತದ ಯೋಜನೆಗಳಾದ ಸ್ವಯಂ ಉದ್ಯೋಗ ಯೋಜನೆ, ಉದ್ಯಮಶೀಲತಾ ಅಭಿವೃದ್ದಿ ಯೋಜನೆ, ನೇರಸಾಲ ಯೋಜನೆ, ಮೈಕ್ರೋಕ್ರೆಡಿಟ್ ಯೋಜನೆ, ಮೈಕ್ರೋಕ್ರೆಡಿಟ್ ಫೈನಾನ್ಸ್ (ಕಿರುಸಾಲ) ಯೋಜನೆ, ಮಹಿಳಾ ಕಿಸಾನ್ ಯೋಜನೆ, ಭೂ ಒಡೆತನ ಯೋಜನೆ, ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆ, ಗಂಗಾ ಕಲ್ಯಾಣ ಯೋಜನೆ ಹೀಗೆ ಅನೇಕ ರೀತಿಯ ಯೋಜನೆಗಳಿದ್ದು ಇವುಗಳು ಪರಿಶಿಷ್ಟ ಜಾತಿ ಜನರನ್ನು ಒಳಗೊಳ್ಳುತ್ತಿದೆ. ಆ ಮೂಲಕ ಸಂಗ್ರಹಿಸಿದ ದತ್ತಾಂಶಗಳ ವಿಶ್ಲೇಷಣೆಯನ್ನು ಮಾಡಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಅಸ್ಪೃಶ್ಯರ ಸಬಲೀಕರಣಕ್ಕೆ ನೀಡಲಾಗಿರುವ ಯೋಜನೆಗಳ ಬಗೆಗಿನ ಸಮಗ್ರ ಚಿತ್ರಣವನ್ನು ಹೊರತರಲಾಗಿದೆ.

**ಉಪಸಂಹಾರ**

ಡಾ. ಬಿ.ಆರ್. ಅಂಬೇಡ್ಕರ್ ರವರು ಭಾರತದ ಸಂವಿಧಾನ ಶಿಲ್ಪಿ ಹಾಗೂ ಮಾನವತವಾದಿ. ಇವರು ಅಸ್ಪೃಶ್ಯತೆ ಎಂಬ ಸಾಮಾಜಿಕ ಪಿಡುಗಿಗೆ ಸಿಕ್ಕಿ ಅದರಿಂದ ಬಿಡುಗಡೆಗೊಂಡು ಬಂದವರು. ಇವರು ತಮ್ಮ ಇಡೀ ಜೀವನ ಅಸ್ಪೃಶ್ಯತೆಯ ವಿರುದ್ಧ ಹೋರಾಡಿದವರು ಹಾಗೂ ತಮ್ಮ ಸಮುದಾಯ ಇದರಿಂದ ಮುಕ್ತಿ ಹೊಂದಿ ಸಮಾಜದಲ್ಲಿ ಇತರೆ ಎಲ್ಲಾ ಸಮುದಾಯದ ಜನರಂತೆ ಸಮಾನ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗುವಂತೆ ಸಮಾನತೆಯನ್ನು ತಂದುಕೊಟ್ಟವರು. ಇವರ ಪ್ರಕಾರ ಅಸ್ಪೃಶ್ಯತೆಯು ಮೇಲ್ಜಾತಿಯ ಬ್ರಾಹ್ಮಣರ ಉದ್ದೇಶಪೂರ್ವಕ ನೀತಿಯಿಂದಾಗಿ ಹುಟ್ಟಿಕೊಂಡಿತು ಎಂದು ತಮ್ಮ ಸಿದ್ಧಾಂತವನ್ನು ತಮ್ಮ ಗ್ರಂಥವಾದ ಭಾರತದಲ್ಲಿ ಅಸ್ಪೃಶ್ಯತೆ ಎಂಬ ತಮ್ಮ ಗ್ರಂಥದಲ್ಲಿ ಮಂಡಿಸಿದ್ದಾರೆ. ಹಾಗೆಯೇ ಮಾನವತ ಧರ್ಮವಾದ ಭೌದ್ಧ ದರ್ಮಧ ಸಮಾನ ಸಮಾಜದ ತತ್ವವನ್ನ ಸ್ವಿಕರಿಸಿದ ಜನರ ವಿಶಾಲ ಮನೋಭಾವನೆಯನ್ನ ಸಹಿಸದ ಬ್ರಾಹ್ಮಣರು ತಮ್ಮ ಅಸಮಾನತೆಯಿಂದ ಕೂಡಿದ ಹಿಂದೂ ಧರ್ಮವನ್ನು ಮತ್ತಷ್ಟು ಪ್ರಚುರಪಡಿಸಲು ಮುಂದಾಗಿ ಬೌದ್ಧ ದರ್ಮದ ವಿರುದ್ಧ ಪ್ರಚಾರ ಮಾಡುವ ಮೂಲಕ ಅಸ್ಪೃಶ್ಯತೆಯನ್ನ ಉಳಿಸಿಕೊಂಡರು. ಒಟ್ಟಾರೆ ಅಸ್ಪೃಶ್ಯತೆಯ ಉಗಮದ ಬಗೆಗೆ ಹಲವಾರು ವೈಜ್ಞಾನಿಕ ಸಾಕ್ಷ್ಯಾಧಾರಗಳು ಹಾಗೂ ಗ್ರಂಥಗಳು ದೊರೆತಿದ್ದು ಅಸ್ಪೃಶ್ಯತೆಯು ಸಮಾಜದ ಯಾವುದೋ ಒಂದು ಸಮುದಾಯದ ನಿರಂಕುಶ ಮನಸ್ಥಿಯ ಹುಟ್ಟು ಎಂಬುದಂತು ಈ ಸಿದ್ಧಾಂತಗಳಿಂದ ಅರಿವಿಗೆ ಬಂದಿದೆ.

**ಗ್ರಂಥಋಣ**


1. Ambedkar, B.R. What Congress and Gandhi have done to the Untouchables (2nd edn.). Bombay: Thacker, 1946.
2. Ambedkar, B.R. Annihilation of Caste. Bangalore: Dalit Sahitya Academy, 1945.
3. Amur, G.S, Essays on Modern Kannada Literature. Bangalore: Karnataka Sahitya Academy, 2001.
4. Anand, Mulk Raj. Apology for Heroism: A Brief Autobiography of Ideas. Bombay: Kutub-Popular, 1957.
5. Beteille, Andre. Marxism and Class Analysis. New Delhi: Oxford India paperbacks, 2008.
6. Lohia, Rammanohar. Marx, Gandhi and Socialism. Hyderabad: Nava Hindu publications, Hyderabad, 1963.
7. Malagatti, Aravinda. Sahitya Samskruti Mattu Dalitha Pragne. Kannada. Banglore: Kannada Sahitya parishat, 2004.
8. Rudramuni, M.H. Art and Social Consideration in the Fiction of Prem Chand and Mulk Raj Anand. Mysore: Girish Enterprises, 2008.
9. ಡಾ.ಬಿ.ಆರ್.ಅಂಬೇಡ್ಕರ್ ರವರ ಬರಹಗಳು ಮತ್ತು ಭಾಷಣಗಳು ಸಂಪುಟ–1, ಕನ್ನಡ ಮತ್ತು ಸಂಸ್ಕೃತ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕಲಾಗ್ರಾಮ ಜ್ಞಾನಭಾರತಿ, ಬೆಂಗಳೂರು–56.
10. ಡಾ.ಬಿ.ಆರ್.ಅಂಬೇಡ್ಕರ್ ರವರ ಬರಹಗಳು ಮತ್ತು ಭಾಷಣಗಳು ಸಂಪುಟ–4, ಕನ್ನಡ ಮತ್ತು ಸಂಸ್ಕೃತ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕಲಾಗ್ರಾಮ ಜ್ಞಾನಭಾರತಿ, ಬೆಂಗಳೂರು–56.